**ಓ.ಎಸ್. ನಂ. 9/2024** **ಪಿ.ಡಬ್ಲ್ಯೂ- 2**

**ಸಾಕ್ಷಿಯನ್ನು ದಿನಾಂಕ 3.4.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಪಿ1 ಕ್ರಯದ ಕರಾರುಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ. ಸಾಕ್ಷಿದಾರರು ನಿಪಿ1 ರಲ್ಲಿರುವ ಪ್ರತಿವಾದಿಯರ ಮತ್ತು ವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ1 ಎ ರಿಂದ ನಿಪಿ1 ಸಿ ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಡಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಆನಂದ್ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಸದರಿ ಸಹಿಯನ್ನು ನಿಪಿ1 ಇ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಸಿ ವಕೀಲರಿಂದಃ**

ನಾನು ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾತ್ರ ಮಾಡುತ್ತೇನೆ. ನಾನು ಹ್ಯಾಂಡಪೋಸ್ಟನಲ್ಲಿ ಶುಂಠಿ ಮತ್ತು ಹತ್ತಿ ವ್ಯಾಪಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಹ್ಯಾಂಡಪೋಸ್ಟನಲ್ಲಿರುವ ಅಂಗಡಿಗೆ ನಾನು ಬೆಳೆದ ಬೆಳೆಯನ್ನು ಮಾರಾಟ ಮಾಡುತ್ತೇನೆ ಎನ್ನುವರು. ನನ್ನನ್ನು ಹ್ಯಾಂಡಪೋಸ್ಟನಲ್ಲಿ ಶ್ರೀಕಂಠ ಎಂಬ ಹೆಸರಿನಿಂದ ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ನಾನು ಶ್ರೀಕಂಠ ಎಂಬ ಹೆಸರಿನಲ್ಲಿ ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಹ್ಯಾಂಡಪೋಸ್ಟನಲ್ಲಿರುವ ಅಂಗಡಿಯ ಬಳಿ ಬಂದು ದಾವಆಸ್ತಿಯನ್ನು ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ಅದೇ ದಿನ ಮಾರಾಟದ ಮಾತುಕತೆಯಾಗಿರುತ್ತದೆ. ಮಾತುಕತೆಯಾದಾಗ ಮದ್ಯಾಹ್ನ 12 ಗಂಟೆಯಾಗಿತ್ತು. ಮಾತುಕತೆಯು15-20 ನಿಮಿಷಗಳ ಕಾಲ ನಡೆದಿರುತ್ತದೆ. ಮಾತುಕತೆಯ ಸಮಯದಲ್ಲಿ 1 ನೇ ಪ್ರತಿವಾದಿಯು 6 ಲಕ್ಷಕ್ಕೆ ಆಸ್ತಿಯನ್ನು ಮಾರಾಟ ಮಾಡುವುದಾಗಿ ಹೇಳಿರುತ್ತಾರೆ. ವಾದಿಯು 5 ಲಕ್ಷ ರೂಪಾಯಿಗೆ ಖರೀದಿ ಮಾಡುವುದಾಗಿ ಹೇಳಿದ್ದು ಕೊನೆಗೆ 6 ಲಕ್ಷಕ್ಕೆ ಮಾತುಕತೆಯಾಗಿರುತ್ತದೆ. ಮಾತುಕತೆಯಾದಾಗ ನಾನು, ವಾದಿ, ಆನಂದೇಗೌಡ

ಮತ್ತು ಪ್ರತಿವಾದಿಯರು ಇದ್ದರು. 1 ನೇ ಪ್ರತಿವಾದಿಯು ಮಕ್ಕಳ ವಿದ್ಯಾಭ್ಯಾಸ ಮತ್ತು ಕೈಸಾಲ ತೀರಿಸಲು ಆಸ್ತಿ ಮಾರಾಟ ಮಾಡುತ್ತಿರುವುದಾಗಿ ಹೇಳಿರುತ್ತಾರೆ. ಸದರಿ ದಿನ ಮುಂಗಡ ಹಣ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಾತುಕತೆಯಾದ ದಿನವೇ ಕರಾರುಪತ್ರ ಮಾಡಿಕೊಂಡಿರುತ್ತಾರೆ. ನಾನು ಅದೇ ದಿನ ನೋಂದಣಿ ಕಛೇರಿಯಲ್ಲಿ ಕರಾರುಪತ್ರಕ್ಕೆ ಸಹಿ ಮಾಡಿರುತ್ತೇನೆ. ನನ್ನನ್ನು 1 ನೇ ಪ್ರತಿವಾದಿ ಸಾಕ್ಷಿದಾರನಾಗಿ ಸಹಿ ಮಾಡಲು ನೋಂದಣಿ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಸಾಕ್ಷಿದಾರರು ಮುಂದುವರಿದು ವಾದಿ ಮತ್ತು 1 ನೇ ಪ್ರತಿವಾದಿ ಇಬ್ಬರೂ ನನ್ನ ಸಂಬಂಧಿಕರಾಗಿದ್ದು ಇಬ್ಬರೂ ಕರೆದಿರುತ್ತಾರೆ ಎನ್ನುವರು. ನಾನು ಮತ್ತು ವಾದಿ ಅಕ್ಕಪಕ್ಕದ ಊರಿನವರಾಗಿರುತ್ತೇವೆ. ನಿಪಿ1 ನ್ನು ಬರೆದ ಚನ್ನಕೇಶವಗೌಡ ಸಹ ನನ್ನ ಸಂಬಂಧಿಕರು ಎಂದರೆ ಸರಿ. ಸದರಿ ದಿನ ನಿಪಿ1 ನೋಂದಣಿಯಾದ ಸಮಯದಲ್ಲಿ ವಾದಿಯು ಪ್ರತಿವಾದಿಯರಿಗೆ ಬ್ಯಾಂಕ್ ಮೂಲಕ ಮುಂಗಡ ಹಣವನ್ನು ಪಾವತಿ ಮಾಡಿರುತ್ತಾರೆ. ವಾದಿಯು ಫೆಡರಲ್ ಬ್ಯಾಂಕಿನ ಚೆಕ್/ಡಿ.ಡಿ. ಮೂಲಕ ಹಣ ನೀಡಿರುತ್ತಾರೆ. ಚೆಕ್ ಅಥವಾ ಡಿ.ಡಿ. ಯಾವುದೆಂದು ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ದಾವಆಸ್ತಿಯ ಸರ್ವೆ ನಂಬರ್ 39/3, ವಿಸ್ತೀರ್ಣ 1 ಎಕರೆ ಆಗಿರುತ್ತದೆ. ಸದರಿ ಆಸ್ತಿಯು 1 ನೇ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನೋಂದಣಿ ಕಛೇರಿ ಒಳಗೆ ನಿಪಿ1 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ದಿನ ನಾನು, ವಾದಿ, ಪ್ರತಿವಾದಿಯರು ಹಾಗೂ ಆನಂದೇಗೌಡ ನಿಪಿ1 ಕ್ಕೆ ಸಹಿ ಮಾಡಿರುತ್ತೇವೆ. ಪ್ರತಿವಾದಿಯರು ಸಾಲಕ್ಕಾಗಿ ವಾದಿಯ ಬಳಿ ಬಂದಿದ್ದು 2021 ರಲ್ಲಿ ಆಧಾರಪತ್ರ ನೋಂದಣಿಯಾಗದಿದ್ದರಿಂದ ನಾನು, ವಾದಿ, ಆನಂದೇಗೌಡ ಮತ್ತು ಚನ್ನಕೇಶವಗೌಡ ಸೇರಿ ಪ್ರತಿವಾದಿಯರಿಗೆ ತಿಳಿಯದಂತೆ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ನನಗೆ ಸಮನ್ಸ ಬಂದಿರುವುದಿಲ್ಲ, ನನಗೆ ವಾದಿ ಪರ ವಕೀಲರು ಕರೆ ಮಾಡಿ ಸಾಕ್ಷಿ ನುಡಿಯಲು ಹೇಳಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಕರಾರುಪತ್ರವು ದಿನಾಂಕ 23.3.2021 ರಂದು ಆಗಿರುತ್ತದೆ. ಹೆಬ್ಬಾಳ ಗ್ರಾಮವು ಪುರಸಭೆ ವ್ಯಾಪ್ತಿಗೆ ಬರುತ್ತದೆ. ದಾವಆಸ್ತಿಯು ತಂಬಾಕು ಮಂಡಳಿ ಬಳಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಅಕ್ಕಪಕ್ಕದಲ್ಲಿ ಕನಕಭವನ, ಟ್ರೂ ಶೆಪರ್ಡ್ ಶಾಲೆ ಇರುತ್ತದೆ ಎಂದರೆ ಸಾಕ್ಷಿದಾರರು ಕನಕ ಭವನ ಇರುವುದಿಲ್ಲ ಎನ್ನುವರು. ದಾವಆಸ್ತಿಯ ಅಕ್ಕಪಕ್ಕದಲ್ಲಿ ಲೇಔಟ್ ಮತ್ತು ಬಡಾವಣೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯ ಮೌಲ್ಯ ಜಾಸ್ತಿಯಾಗಿರುವುದರಿಂದ ನಾನು, ವಾದಿ,

ಆನಂದೇಗೌಡ ಹಾಗೂ ಚನ್ನಕೇಶವಗೌಡ ಸೇರಿ ದಾವಆಸ್ತಿಯನ್ನು ಕಬಳಿಸಲು ಸುಳ್ಳು ಕರಾರುಪತ್ರವನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.